




ಶರಭ ಶಿಲ್ಪ

ಮರದ ಹಣ್ಣೆಲೆ ಕಳಚಿ ಬಿದ್ದರೂ ಖಳಕ್‌ಟಪ್ ಸಪ್ಪಳ ಅಲೆಅಲೆಯಾಗಿ ಎದ್ದು ಕಿವಿಕದವನ್ನು ಬಡಿಯುತ್ತದೆ. ಈ ನೀರು ಮತ್ತು ಪರ್ಣಪತನದ ಸಂಗೀತವನ್ನು ಆಲಿಸುವುದಕ್ಕಾದರೂ ಶರಾವತಿ ಕಣಿವೆಯಲ್ಲಿ ರಾತ್ರಿ ಕಳೆಯಬೇಕು. ಭೀಮೇಶ್ವರ ಅರಣ್ಯದ ರಾತ್ರಿಯೂ ಇಷ್ಟೇ ನೀರವವಾಗಿತ್ತು. ಆದರೆ ನಮ್ಮ ಚಾರಣ ತಂಡ ದಣಿದು ನಿದ್ದೆಯಲ್ಲಿ ಹೊರಡಿಸುತ್ತಿದ್ದ ಗೊರಕೆಯ ವಾದನಗಳು ಕಾಡಿನ ನೀರವತೆಯನ್ನು ವಿಚಿತ್ರವಾಗಿ ಕದಡಿದವು. ದಟ್ಟಕಾಡಲ್ಲಿ ಮಲಗಿದರೆ ಆಗುವ ಇನ್ನೊಂದು ಅನುಭವವೆಂದರೆ, ಬೆಳಕು ಹರಿವ ಮುನ್ನವೇ ಸಹಸ್ರಾರು ಹಕ್ಕಿಗಳು ಒಟ್ಟಿಗೇ ಮಾಡುವ ಸಮೂಹಗಾನ. ಗಾಯಕರು ಕಾಣುವುದಿಲ್ಲ. 'ಗಿಡಗಂಟೆಯ ಕೊರಳೊಳಗಿಂದ' ಸಂಗೀತ ಮಾತ್ರ ಕೇಳುತ್ತದೆ. ಇಷ್ಟೊಂದು ಹಕ್ಕಿಗಳಿರಬೇಕಾದರೆ ಅವಕ್ಕೆ ಬೇಕಾದ ಹಣ್ಣಿನ ಮರಗಳೂ ಇರಬೇಕು ಅಥವಾ ಕೀಟಗಳು ಯಥೇಚ್ಛ ಸಿಕ್ಕುತ್ತಿರಬೇಕು.

ಪರಸ್ಪರ ಅವಲಂಬಿತ ಸಂಬಂಧದಲ್ಲಿರುವುದು ಮತ್ತು ಕಾಲಕಾಲಕ್ಕೆ ರೂಪಾಂತರ ಪಡೆಯುವುದು, ಪಡುವಣ ಘಟ್ಟದ ಸಸ್ಯ ಮತ್ತು ಜೀವಿಗಳ ಗುಣವಿರಬೇಕು. ನಮಗೆ ದಾರಿಯಲ್ಲೊಂದು ವಿಟ್‌ವೈಪರ್ ಹಾವು ದರ್ಶನ ಕೊಟ್ಟಿತು. ಇನ್ನೂ ಎಳಸು. ಎಳೆಗರು ಅಂಗಳದಲ್ಲಿ ಚೆನ್ನಾಟವಾಡುತ್ತ ತನ್ನ ಕೈಕಾಲುಗಳ ಕೆಲಸವೇನೆಂದು ಪರೀಕ್ಷಿಸಿಕೊಳ್ಳುವಂತೆ ಅಡ್ಡಾಡಲು ಬಂದಿತ್ತು. ಅದರ ಸುತ್ತ ಇರುವೆ ಮುತ್ತಿಕೊಂಡಿದ್ದವು. ಅದು ಅರಣ್ಯ ಇಲಾಖೆ ಗಸ್ತಿಗೆಂದು ಮಾಡಿದ್ದ ರಸ್ತೆಯಲ್ಲಿ ಮಲಗಿತ್ತು. ಜೀಪು ಹತ್ತಿ ಸತ್ತುಹೋಗಿರಬಹುದೆಂದೂ ಇರುವೆಗಳು ಅದರ ಕಳೇಬರವನ್ನು ಕಬಳಿಸುತ್ತಿವೆಯೆಂದೂ ಭಾವಿಸಿ, ಕರುಣೆಯಿಂದ ಅದರ ತಲೆಯ ಮೇಲಿದ್ದ ಒಣಗಿದೆಲೆಯನ್ನು ತೆಗೆಯಲು ಕೈಚಾಚಿದೆ. ಕೂಡಲೇ ಚಂಗನೆ ದೂರಕ್ಕೆ ಜಿಗಿಯಿತು. ನನ್ನದು ಮೂರ್ಖ ಕೆಲಸವಾಗಿತ್ತು. ಅದು ಕಚ್ಚಿದ್ದರೆ ಆಂಟಿವೆನಮ್ ಇಂಜೆಕ್ಷನ್ ಪಡೆಯಲು ಐವತ್ತು ಕಿ.ಮೀ. ದೂರ ಹೋಗಬೇಕಿತ್ತು. ಬದುಕುಳಿಯುವುದು ಕಷ್ಟವಿತ್ತು. ಅರಣ್ಯಲೋಕದಲ್ಲಿ ಯಾವುದೂ ಟೇಕನ್ ಫಾರ್ ಗ್ರಾಂಟೆಡ್ ಅಲ್ಲ.

ನಾವು ಕರಡಿ–ಹುಲಿ–ಚಿರತೆ–ಕಾಟಿಗಳ ಕಾಡಲ್ಲಿದ್ದೆವು. ಚಿರತೆ ವಿಸರ್ಜಿಸಿದ್ದ ಬೆಳ್ಳಗಿನ ರೋಮಭರಿತ ಮಲದುಂಡೆಗಳನ್ನೂ ಕಂಡೆವು. ಆದರೆ ಚಾರಣಿಗರಾದ ನಮಗೆ ಭಯವಿದ್ದುದು ಸುಳಿವುಗೊಡದೆ ರಕ್ತಪಾನ ಮಾಡುವ ಇಂಬಳಗಳ ಬಗ್ಗೆ. ಮಳೆಗಾಲದಲ್ಲಿ ಕೊಡಚಾದ್ರಿ ಏರಲು ಹೋಗಿ ಇವುಗಳಿಂದ ಚೆನ್ನಾಗಿ ಕಚ್ಚಿಸಿಕೊಂಡಿದ್ದೆ. ಶರಾವತಿ ಕಣಿವೆಗೆ ನಾವು ಹೋಗಿದ್ದು ಚಳಿಗಾಲವಾದ್ದರಿಂದ ಇಂಬಳ ಇರಲಿಕ್ಕಿಲ್ಲ ಎಂದುಕೊಂಡಿದ್ದೆವು. ಆದರೆ ಸೂರ್ಯರಶ್ಮಿ ನೆಲಕ್ಕೆ ತಾಗದಂತೆ ಮರಗಳು ಕೊಡೆಹಿಡಿದೆಡೆಯಲ್ಲಿದ್ದ ತೇವಾಂಶದಲ್ಲಿ ಅವು ಹಾಜರಾತಿ ಕೊಟ್ಟವು. ತಮ್ಮ ಹಾದಿಯಲ್ಲಿ ಬರುವ ಜೀವಿಗಳಿಗಾಗಿ ತಪಸ್ಸು ಕೂರುವ ಅವು, ಮಳೆಗಾಲ ಬರುವನಕ ಕೋಶಾವಸ್ಥೆಗೆ ಹೋಗಿ ಕಸಕಡ್ಡಿಯಂತೆ ಬಿದ್ದಿರುತ್ತವೆಯಂತೆ. ಮರಗಳು ದಟ್ಟ ನೆರಳಿನಿಂದ ನೆಲದ ತೇವಾಂಶವುಳಿಸಿ ಇಂಬಳಗಳನ್ನು ರಕ್ಷಿಸುತ್ತಿದ್ದರೆ, ಇಂಬಳಗಳು ಕಾಡಿನೊಳಗೆ ಜನ ನುಗ್ಗದಂತೆ ತಡೆಯುತ್ತಿವೆಯೇ? ಇದು ನಿಜವಿದ್ದರೆ ಇದೊಂದು ವಿಶಿಷ್ಟ ರಕ್ಷಣಾ ಒಪ್ಪಂದ. ನಾವು ಸ್ವರಕ್ಷಣೆಗಾಗಿ ತಂಬಾಕು ಉಪ್ಪು ಇತ್ಯಾದಿ ಶಸ್ತ್ರಗಳನ್ನು ಇಟ್ಟುಕೊಂಡು ಹೋಗಿದ್ದೆವು. ಆದರೆ ಇಂಬಳಗಳಿಗೆ ರಕ್ತದಾನ ಮಾಡುವುದು ತಪ್ಪಲಿಲ್ಲ. ನಾವು ಮಾತಾಡಿದ ಕಾಡಂಚಿನ ಯಾವ ರೈತರೂ ಇಂಬಳಗಳನ್ನು, ಹುಲಿ–ಚಿರತೆಗಳನ್ನು ದೂರಲಿಲ್ಲ. ಆದರೆ ಬೆಳೆಯನ್ನು ತಿಂದುಹಾಕುವ ನವಿಲು, ಹಂದಿ, ಮಂಗಗಳಿಂದ ರೋಸಿಹೋಗಿದ್ದರು.

ಹುಲಿ, ಚಿರತೆ, ಕಡವೆ, ಕರಡಿಗಳ ಶರಾವತಿ ಕಾಡಲ್ಲಿ ಜೇಡ, ಕಪ್ಪೆ, ಕೋಳಿ, ಅಳಿಲು ಮೊದಲಾದ ಸಣ್ಣಜೀವಿಗಳೂ ಇವೆ. ಬ್ಯಾಣದ ಬಯಲಿರುವಲ್ಲೆಲ್ಲ, ನೀರಿರುವ ಕಡೆ ಕೂಳಿ ಹೂಡಿ ಮೀನು ಹಿಡಿಯುವವರಂತೆ, ಜೇಡಗಳು ಚಂದದ ಜಾಲಹೆಣೆದು, ನಡುವೆ ಬಿಲಕೊರೆದು ಗಿರಾಕಿಗಳಿಗೆ ಕಾಯುತ್ತಿದ್ದವು. ಮಂಜು ಸುರಿದ ಅವುಗಳ ಬಲೆಗಳು ಯಾರೋ ಚೆಲ್ಲಿಹೋದ ಮುತ್ತಿನೊಡವೆಗಳಂತೆ ತೋರುತ್ತಿದ್ದವು. ಇಂಬಳ, ಹಲ್ಲಿ, ಕಪ್ಪೆ, ಜೇಡಗಳು ಬೇಟಕ್ಕೂ ಬೇಟೆಗೂ ಕಾಯುವ ಸಹನೆ ಅಸಾಧಾರಣ. ನಾವು ನಾಗೊಳ್ಳಿಯ ಸರಳಾ ಹೊಳೆಯಲ್ಲಿ ಈಸಾಡಿದೆವು. ಹೀಗೆ ಜಲಕೇಳಿಯಾಡುವಾಗ ಒಂದು ಕಪ್ಪೆ ಹರಿವ ನೀರೊಳಗೆ ನಿಂತಿದ್ದ ಸಣ್ಣಗಿಡದ ಟೊಂಗೆಯ ಮೇಲೆ, ಗಮನವಿಟ್ಟು ನೋಡದಿದ್ದರೆ ಪತ್ತೆಯೇ ಆಗದಂತೆ, ಯಾರನ್ನೋ ನಿರೀಕ್ಷಿಸುತ್ತ ಕೂತಿರುವುದು ಕಂಡಿತು. ಇನ್ನೊಂದೆಡೆ ದಟ್ಟಕಾಡೊಳಗೆ ಮರದಿಂದ



ಕಲ್ಲುಗಳ ನಡುವೆ ಹೆಸರಿಲ್ಲದ ಹೂವು



ಕಾಡಿನಲ್ಲಿ ಸತ್ತು ಬಿದ್ದಿರುವ ಕೋತಿಮರಿ